

'ತಾಯಿ ಶಂಕರಿ ಮತ್ತು ಅರ್ಚಕರನ್ನು ಬಿಟ್ಟರೆ ಇಲ್ಲಿರುವುದು ನಾನು ಮಾತ್ರ' ಮನದಲ್ಲೇ ಆಡಿಕೊಂಡು, ಮೇಲ್ಛಾವಣಿಯು ಹಾಸಿದ ನೆರಳಿನಡಿಯಲ್ಲಿ ಕಣ್ಣು ಮಿಟುಕಿಸದೆ ಕುಳಿತು ದೇವಿಯನ್ನೇ ನೋಡುತ್ತಿದ್ದಳು.

'ಎಂತಹ ಮಧುರ ಭಾವ ದೇವಿಯ ಮುಖದಲ್ಲಿ, ಅದೆಂತಹ ಮೃದುಲ ವೈಯ್ಯಾರದ ಒನಪು ಆಕೆಯದ್ದು. ಶಂಕರಿಯಂತೆ ನಾನೂ ಒಬ್ಬಾಕೆ ಹೆಣ್ಣು' ಸರ್ವಾಲಂಕೃತ ಭೂಷಣೆಯನ್ನು ಕಣ್ಣುಮುಚ್ಚಿ ನೆನೆಯುತ್ತಾ ಮೆಲ್ಲುತ್ತಿರುವಾಗ, ಯಾರೋ ಮೈಯನ್ನು ಸ್ಪರ್ಶಿಸಿದಂತಾಗಲು ಕಣ್ ತೆರೆದು ನೋಡಿದರೆ, ಹೆಂಗಸೊಬ್ಬಳು ಅವಳ ಮೈಸವರಿ ನಮಸ್ಕರಿಸಿ ಗರ್ಭಗುಡಿಯತ್ತ ಹೆಜ್ಜೆ ಹಾಕಿದಳು.

'ಓ! ಅಮ್ಮ ಬನ್ನಿ' ಗುಡಿಯ ಅರ್ಚಕರು ಕರೆದು,'ಆಕೆ' ತಂದ ಹಣ್ಣುಕಾಯಿಯನ್ನು ಪಡೆದುಕೊಂಡು, ದೇವಿಗೆ ಅರ್ಪಿಸಲು ಒಳಕ್ಕೆ ನಡೆದರು. ದೇವಿಗೆ ಹಣ್ಣುಕಾಯಿಯನ್ನು ಅರ್ಪಿಸಿ, 'ಅಮ್ಮ sss...' ಎಂದು ಕರೆದವರು, ಹೊರಕ್ಕೆ ಬಂದು, 'ಆಕೆ'ಗೆ ತೀರ್ಥ ಪ್ರಸಾದವನ್ನು ಕೊಟ್ಟರು.

'ಇವಳೆಲ್ಲಿಂದ ಬಂದವಳು, ಭಟ್ರೇ?' ಅರ್ಚಕರನ್ನು 'ಆಕೆ' ಕೇಳಿದಳು.

'ಗೊತ್ತಿಲ್ಲ, ಅಮ್ಮ. ನಾನೂ ಈವತ್ತೇ ಮೊದಲು ನೋಡಿದ್ದು' ಅರ್ಚಕರು ಹೇಳಿದರು.

ಮಮತೆತುಂಬಿದ 'ಆಕೆ'ಯ ಮುಖವು ಅಗಲಗೊಂಡು, 'ಎಷ್ಟು ಮುದ್ದಾಗಿದ್ದಾಳೆ, ಭಟ್ರೇ' ಹೇಳಿದಾಕೆ, 'ಅವಳ' ಬಳಿ ಕುಳಿತು,ಮೈದಡವಿ ಅಂದಚಂದವನ್ನು ವರ್ಣಿಸುತ್ತಾ, ಮುದ್ದಿಸಿ ಹಣ್ಣನ್ನು ಕೊಟ್ಟಳು.

'ಆಕೆ'ಯ ಮುದ್ದನ್ನು ಖುಷಿಯಿಂದಲೇ 'ಅವಳು' ಅನುಭವಿಸುತ್ತಿದ್ದಳು.

'ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆದವಳಿಗೆ ಏನೆಂದು ನಾನು ಉತ್ತರಿಸಲಿ?' ಅಂದುಕೊಂಡು, ತನ್ನ ಮೂಗಿನ ಹೊಳ್ಳೆಗಳ ಮೂಲಕ ಮೂಕಸಂಕಟವನ್ನು ಉಸ್ಸೆಂದು ಉಸಿರಿಟ್ಟು ವ್ಯಕ್ತಪಡಿಸಿದಳು. 'ಆಕೆ'ಯ ಕೈಯನ್ನು ಮೂಸಿ, ಮುಖವನ್ನು ಕೈಗೆ ಒರೆಸುತ್ತಾ, ಅವಳೂ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಳು.

'ಭಟ್ರೇ, ಎಂತ ಬೇಸಗೆ ಈ ಸಲದ್ದು! ನೀವು ಇವಳಿಗೆ ಮೇವಿನ ವ್ಯವಸ್ಥೆ ಮಾಡಿ, ಖರ್ಚು ನನ್ನದು.

'ಆಕೆ' ಹೇಳಿದಳು.

'ಆಯ್ತಮ್ಮಾ, ನೀವು ಹೇಳಿದ ಮೇಲೆ ಮತ್ತೆಂತ ಯೋಚನೆ. ಈ ಸಲದ್ದು ಭಯಂಕರ ಬೇಸಗೆ ಅಮ್ಮ. ಮೂರೂ ಹೊತ್ತು ಬೆವರಿಗೆ ಚಂಡಾಪುಂಡಿ' ಹೇಳಿ 'ಆಕೆ'ಯನ್ನು ನೋಡಿ ನಕ್ಕರು.

'ದೇವಿ ಶಂಕರಿ ನಾನು ಜೊತೆಗೆ ಈ ಮುದ್ದು ಕಪಿಲೆಯೂ' ಎನ್ನುತ್ತಾ ಕೆಚ್ಚಲಿಗೆ ಕೈ ಹಾಕಿ ಮುದ್ದಿಸಿದ 'ಆಕೆ' ಕಪಿಲೆಯನ್ನು ನೋಡಿ 'ನಾವು ಮೂವರೂ ಹೆಣ್ಣು ಜಾತಿ. ಗೊತ್ತುಂಟಾ ನಿನಗೆ? ಹೆಣ್ಣು ಮಣ್ಣಿನ ಹೊನ್ನು' ಎನ್ನುತ್ತಾ, ಮತ್ತೊಮ್ಮೆ ಮುದ್ದಿಸಿ, ಹೊರಡಲು ಎದ್ದು ನಿಂತಳು.

'ಆಕೆ' ಹೊರಡುವುದನ್ನು ಗಮನಿಸಿ ದಢಕ್ಕನೆದ್ದ ಕಪಿಲೆಯನ್ನು, 'ಅಯ್ಯೋ ಮಲಗು...'ಎಂದಳು. ಕಿವಿಯನ್ನು ಅಲ್ಲಾಡಿಸುತ್ತಾ, ಬಾಲವನ್ನು ಬೀಸುತ್ತಾ 'ಆಕೆ'ಯ ಮೈಯ ಗಂಧವನ್ನು ಕಪಿಲೆ ಆಘ್ರಾಣಿಸಿಕೊಂಡಳು.

'ಎಂತಹ ದೇವ ಸುಗಂಧವದು. ನನ್ನಮ್ಮನ ಮೈಯ ಪರಿಮಳದಂತೆ... ಅವಳದ್ದೇ ಬಿಸಿಯೊನಪು' ಅಂದುಕೊಂಡಳು.

ಗುಡಿಯ ಹೊಸ್ತಿಲನ್ನು ದಾಟಿ ಹೋಗಿ, 'ಆಕೆ' ಕಪಿಲೆಯತ್ತ ತಿರುಗಿ ನಸುನಕ್ಕು ಮುಂದಕ್ಕೆ ನಡೆದಳು. ಮಧ್ಯಾಹ್ನದ ಪೂಜೆ ಮುಗಿಸಿ ಮನೆಯತ್ತ ಹೊರಟ ಅರ್ಚಕರು ಗುಡಿಯ ಬಾಗಿಲನ್ನು ಎಳೆಯುತ್ತಾ, 'ಕಪಿಲೆ ಬಾ ನಾನು ಬಾಗಿಲು ಹಾಕುತ್ತಿದ್ದೇನೆ. ಬೇಗ ಬರಬೇಕು.. ಬಾ' ಕೂಗಿ ಕರೆದರು.

ಅರ್ಚಕರ ಕರೆಗೆ ಓಗೊಟ್ಟು ಕಪಿಲೆ ಬಾಗಿಲತ್ತ ಹೆಜ್ಜೆ ಹಾಕಿದವಳ ಬಳಿ ಅರ್ಚಕರು, 'ಅಮ್ಮ ನಿನಗೆ ನಾಮಕರಣ ಮಾಡಿದ್ದಾರಲ್ಲ ಮಾರಾಯ್ತಿ. ನೀನು ಈಗ ನಮ್ಮ 'ಕಪಿಲೆ' ಆಯ್ತಾ' ಹೇಳುತ್ತಾ, ಮೈದಡವಿ ಪ್ರಸಾದ ರೂಪದಲ್ಲಿ ದೊರಕಿದ ಹಣ್ಣನ್ನು ತಿನ್ನಿಸಿ ಮುದ್ದಿಸಿದರು. ಇಬ್ಬರೂ ಗುಡಿಯ ಹೊರಕ್ಕೆ ಬಂದದ್ದೇ, ಅರ್ಚಕರು ಗುಡಿಯ ಬಾಗಿಲನ್ನು ಎಳೆದು ಮುಚ್ಚಿದರು.

***

ತಂಪನ್ನು ಹುಡುಕಲು, ಗುಡಿಯ ಬಳಿಯಿರುವ ಹುಣಸೇಮರದತ್ತ ಕಪಿಲೆ ನಡೆದಳು. ಬಿಸಿಲಿನಿಂದ ರಕ್ಷಿಸಿಕೊಳ್ಳಲು 'ಆಕೆ' ತನ್ನ ಸೆರಗನ್ನು ತಲೆಯ ಮೇಲೆ ಹಾಕಿ, ಕೈಯಲ್ಲಿ ಪ್ರಸಾದವನ್ನು ಹಿಡಿದುಕೊಂಡು ಹೋಗುತ್ತಿದ್ದವಳನ್ನು ನೋಡಿದ ಕಪಿಲೆಗೆ ತಾನು ನಡೆದು ಬಂದ ಹಾದಿಯತ್ತ ತಿರುಗಿ ಹೊರಳದಿರಲು ಸಾಧ್ಯವಾಗಲಿಲ್ಲ.

'ಹೇಗೆ? ಯಾರಿಗೆ? ಎಲ್ಲಿ ಹುಟ್ಟಿದೆ ಅಂತ ನನಗೆ ಗೊತ್ತಿಲ್ಲ. ಹುಟ್ಟಿದೆನಷ್ಟೆ. ಬೆಚ್ಚಗೆ ಅಮ್ಮನ ಗೂಡಿನೊಳಗಿಂದ ಒಂದುದಿನ ಬಳಕ್ಕನೆ ಹೊರಕ್ಕೆ ತಳ್ಳಲ್ಪಟ್ಟೆ. ಮೊದಮೊದಲು ಗಾಢಬೆಳಕಿಗೆ ಕಣ್ಣನ್ನು ತೆರೆಯುವುದು ಕಷ್ಟವೆನಿಸಿತು. ಹೊರಗಿನ ಬೆಳಕಿಗೆ ಕಣ್ಣುಗಳನ್ನು ಹೊಂದಿಸಿ,ಸುತ್ತಲೂ ನೋಡಿದೆ. ಅಮ್ಮ ನನ್ನನ್ನು ನೆಕ್ಕಿನೆಕ್ಕಿ ಮುದ್ದಿಸುತ್ತಿದ್ದಳು.

ವಾತಾವರಣದಲ್ಲಿ ಸಂಭ್ರಮ ಮನೆ ಮಾಡಿತ್ತು. ನನ್ನನ್ನು ಅಮ್ಮನ ಕೆಚ್ಚಲಿನ ಬಳಿ ಕರೆದೊಯ್ದರೆ, ನಾನು ಮುಖವನ್ನು ಅಲ್ಲೊಮ್ಮೆ ಇಲ್ಲೊಮ್ಮೆ ಗುದ್ದಿಸಿಕೊಳ್ಳುತ್ತಾ ಅಮ್ಮನ ಕೆಚ್ಚಲಿಗೆ ಬಾಯಿ ಹಾಕಿದ್ದೇ ಒಂದೇ ಸಮನೆ ಅಮೃತ ಸುರಿಯಲು ತೊಡಗಿತು. ಸಾಧ್ಯವಾಗುವಷ್ಟನ್ನು ಕುಡಿದೆ. ಮಿಕ್ಕಿದ್ದನ್ನು ಒಬ್ಬಳು ಬಂದು ತಂಬಿಗೆಯಲ್ಲಿ ತುಂಬಿಸಿಕೊಂಡಳು. ಹೊಸ ಪರಿಸರವನ್ನು ಕಂಡು, ಬೆರಗಾಗಿ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಕುಣಿಯುತ್ತ ನೆಗೆಯುತ್ತಾ ಓಡಾಡಿದೆ. ನನ್ನನ್ನು ಮುದ್ದಿಸುವವರೇ ಎಲ್ಲರೂ. ಯಜಮಾನನಂತೂ ತನ್ನೆರಡೂ ಕೈಗಳನ್ನು ಬಳಸಿ ನನ್ನನ್ನು ಎತ್ತಿಕೊಂಡು, ಮುದ್ದುಮಾತಿನ ಮಂಟಪವನ್ನೇ ಕಟ್ಟಿದ. ಅದನ್ನು ನೋಡುತ್ತಿದ್ದ ಅಮ್ಮನಿಗೋ ಖುಷಿಯೋ ಖುಷಿ. ಎಲ್ಲರೂ ಮುದ್ದಿಸಿ ನನ್ನ ಅಂದಚಂದವನ್ನು ಹೊಗಳುವವರೇ. ಊರಿಗೆ ಊರೇ ನನ್ನನ್ನು ನೋಡಲು ಬಂದಿತು. ಬರುವಾಗ ಬರೀ ಕೈಯಲ್ಲಿ ಬಾರದೆ ಏನಾದರೊಂದನ್ನು ತರುತ್ತಿದ್ದರು. ಅವೆಲ್ಲವನ್ನೂ ನನಗಾಗಲಿ, ಅಮ್ಮನಿಗಾಗಲಿ ಯಜಮಾನಿ ಕೊಡುತ್ತಿರಲಿಲ್ಲ. ಬಾಣಂತಿ ಅಂತ ಅಮ್ಮನಿಗೆ ಬೇರೆ, ಹಸುಗೂಸು ಎಂದು ನನಗೆ ಬೇರೆಯದ್ದೇ ಉಪಚಾರಗಳು ನಡೆಯುತ್ತಿದ್ದವು. ಅಳು, ನಗು, ಖುಷಿ, ನೋವು ಎಲ್ಲವನ್ನೂ ಹೊತ್ತಿಳಿಸಿಕೊಂಡು ಬೆಳೆದು ನಿಂತೆ.

ಅಮ್ಮನೊಂದಿಗೆ ಖುಷಿಯನ್ನು ಅನುಭವಿಸುತ್ತಾ, ಕಾಡುಮೇಡುಗಳಲೆಲ್ಲಾ ಅಲೆದು ಕಪಿಲೆ ಹೊಟ್ಟೆಯನ್ನು ತುಂಬಿಸಿಕೊಂಡಳು. ಕ್ರಮೇಣ ಒಂದೊಂದೇ ಬಣ್ಣಗಳ ಪರಿಚಯ ಅವಳಿಗಾಯಿತು. ಕೆಲವೊಂದು ಬಣ್ಣಗಳು ಢಾಳಾಗಿ ಕಣ್ಣಿಗೆ ರಾಚಿದರೆ, ಇನ್ನು ಕೆಲವೊಂದು ಮಾಸಿ ಬಿಡುತ್ತಿದ್ದುವು. ಕೆಲವು ಮಂಕಾಗಿಯೇ ಇರುತ್ತಿದ್ದವು. ಹುಟ್ಟಿದ ಮೇಲೆ ಬದುಕಲೇ ಬೇಕು. ಬದುಕಿದ ಮೇಲೆ ಸಾಯುವ ತನಕ ಬಾಳನ್ನು ಸವೆಯಲೇಬೇಕು. ಪಾಲಿಗೆ ಬಂದದ್ದನ್ನು ಭಾವ ಬಂಧನದೊಳಗೆ ಕಟ್ಟಿ ಹಾಕಿಸಿಕೊಂಡು ಅನುಭವಿಸಿಯೇ ತೀರಬೇಕು ಎಂಬ ಯೋಚನೆಯಲ್ಲಿ ದಿನ ಕಳೆದವಳಿಗೆ, ಅಮ್ಮನೆಂಬ ಸಂಭ್ರಮವು ಹೆಚ್ಚುಕಾಲ ಒದಗಿ ಬಂದಿರಲಿಲ್ಲ.